

# ರೋಗಿಗೆ ಮರುಜನ್ಮ ಅಂಗಾಂಗ ದಾನ

**ಅಪಘಾತಕ್ಕೊಳಗಾಗಿ ತಲೆಗೆ ತೀವ್ರ ಪೆಟ್ಟು ಬಿದ್ದಾಗ ವ್ಯಕ್ತಿಯ ಮೆದುಳು ನಿಷ್ಕ್ರಿಯವಾಗುತ್ತದೆ. ಆದರೆ ದೇಹದ ಉಳಿದ ಅಂಗಾಂಗಗಳು ಸಮರ್ಪಕವಾಗಿಯೇ ಇರುತ್ತದೆ. ಇಂಥ ವ್ಯಕ್ತಿಯ ಕುಟುಂಬದವರು ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಅಂಗಾಂಗ ದಾನ ಮಾಡಬಹುದು. ಈ ಮೂಲಕ ಜೀವನ್ಮರಣದ ಮಧ್ಯೆ ಹೋರಾಡುತ್ತಿರುವ ರೋಗಿಗಳಿಗೆ ಮರುಜನ್ಮ ಕಲ್ಪಿಸಬಹುದು.**

■ ಡಾ. ಸುರೇಶ ಸಗರದ

ತ್ತೀರಾ ಇತ್ತೀಚೆಗಿನ ಘಟನೆ. ನಟ ಸಂಚಾರಿ ವಿಜಯ್ ಬೈಕ್‌ನಲ್ಲಿ ಸಾಗುತ್ತಿದ್ದಾಗ ಅಪಘಾತಕ್ಕೊಳಗಾಗಿ ತಲೆಗೆ ತೀವ್ರ ಪೆಟ್ಟು ಬಿತ್ತು. ತಕ್ಷಣ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ. ಮೆದುಳಿಗೆ ಬಿದ್ದ ಏಟಿಗೆ ರಕ್ತ ಹೆಪ್ಪುಗಟ್ಟಿ ಮೆದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ಘೋಷಿಸಿದರು. ಆದರೆ ವಿಜಯ್ ದೇಹದ ಉಳಿದ ಎಲ್ಲ ಅಂಗಗಳೂ ಸಮರ್ಪಕವಾಗಿದ್ದವು. ಕುಟುಂಬದ ಸದಸ್ಯರು ಈತನ ಅಂಗಾಂಗ ದಾನಕ್ಕೆ ಮುಂದಾದರು. ಕಿಡ್ನಿ, ಹೃದಯ, ಕಣ್ಣು, ಲಿವರ್ ಮುಂತಾದ ಅಂಗಗಳನ್ನು ದಾನ ಮಾಡಿ ಅವಶ್ಯಕತೆಯಿರುವ ರೋಗಿಗಳಿಗೆ ಕಸಿ ಮಾಡಿ ಮರುಜನ್ಮ ಕಲ್ಪಿಸಲಾಯಿತು.

ಕಳೆದ ವರ್ಷ ನೆಲಮಂಗಲ ಸಮೀಪ ನಡೆದ ಅಪಘಾತದಲ್ಲಿ 22 ವರ್ಷದ ಯುವಕನೊಬ್ಬನಿಗೆ ತಲೆಗೆ ತೀವ್ರ ಏಟು ಬಿದ್ದುದರ ಪರಿಣಾಮ ವೈದ್ಯರು ಈತನಿಗೆ 'ಬ್ರೈನ್ ಡೆಡ್' ಆಗಿದೆ' ಎಂದರು. ತಕ್ಷಣ ಮನೆಯವರ ಅನುಮತಿ ಮೇರೆಗೆ ಅಂಗಾಂಗ ದಾನ ಮಾಡಿ ಈತನ ಕುಟುಂಬದವರು ಉದಾರತೆ ಮೆರೆದರು.

ಇವೆರಡೂ ಅಂಗಾಂಗ ದಾನಕ್ಕೆ ಸಂಬಂಧಿಸಿದ ತಾಜಾ ಉದಾಹರಣೆಗಳು. ವೈದ್ಯಕೀಯ ಲೋಕದಲ್ಲಿ ಅತ್ಯಂತ ಸುಧಾರಿತ ತಂತ್ರಜ್ಞಾನ ಇದಾಗಿದ್ದು, ಯಾವುದೋ ಕಾರಣಕ್ಕೆ ಕಿಡ್ನಿ, ಕಣ್ಣು, ಹೃದಯ ಮುಂತಾದ ಅಂಗಗಳನ್ನು ಕಳೆದುಕೊಂಡ ರೋಗಿಗಳಿಗೆ ಇದು ವರದಾನವಾಗಿದೆ.

## ಹೆಚ್ಚುತ್ತಿರುವ ಜಾಗೃತಿ

ಇಂದು ಅಂಗ ದಾನ ಮತ್ತು ಜೋಡಣೆಯ ಕುರಿತು ಸಾಕಷ್ಟು ವರದಿಗಳು ಬಿತ್ತರವಾಗುತ್ತಿರುವುದು ಮತ್ತು ಮೃತ ದೇಹದಿಂದ ತೆಗೆದ ಅಂಗವನ್ನು ಬೇರೆ ಸ್ಥಳಕ್ಕೆ ರವಾನಿಸುವಾಗ ಗ್ರೀನ್ ಕಾರಿಡಾರನ್ನು ಆರಕ್ಷಕ ದಳ ಸಿನಿಮೀಯ ಮಾದರಿಯಲ್ಲಿ ನಿರ್ಮಿಸಿಕೊಡುತ್ತಿರುವುದು ಕೂಡ ಅಂಗ ದಾನದ ಕುರಿತು ಜಾಗೃತಿಯನ್ನು ಹೆಚ್ಚಿಸಲು ಕಾರಣವಾಗಿದೆ. ಅಪಘಾತದ ಸಂದರ್ಭದಲ್ಲಿ ಮೆದುಳಿಗೆ ತೀವ್ರ ಪೆಟ್ಟಾದಾಗ ದೇಹದ ಇತರೆ ಅಂಗಗಳು ಕಾರ್ಯ ನಿರ್ವಹಿಸುತ್ತಿದ್ದರೂ ಮೆದುಳಿನ ಬಹು ಭಾಗ ನಿಷ್ಕ್ರಿಯವಾಗಿದ್ದರೆ ಅಂತಹ ಸ್ಥಿತಿಯನ್ನು ಬ್ರೈನ್ ಡೆಡ್ ಅಥವಾ ಮೆದುಳು ಮೃತ ಎಂದು ಕರೆಯುವರು. ಇಂತಹ ಸ್ಥಿತಿಯಲ್ಲಿರುವುದನ್ನು ಬಹು ವೈದ್ಯರ ತಂಡ ಖಚಿತಪಡಿಸಿ ಸಂಬಂಧಿಕರಿಗೆ